ಸಮ.

ಮಂತ್ರಿ: ಒಪ್ಪಿಕೊಳ್ಳಿ ಪ್ರಭು, ನಾವು ಕಳೆದುಕೊಳ್ಳುವಂಥದ್ದೇನೂ ಇಲ್ಲ, (ಪ್ರತಿನಿಧಿಗೆ) ಎಷ್ಟು ಕೊಡುತ್ತೀರೆಂದು ಹೇಳಿ.

ಪ್ರತಿನಿಧಿ: ನಾವು ನಿಮಗೆ ಲಕ್ಷ ಕೊಡುತ್ತೇವೆ.

ರಾಜ: ಲಕ್ಷ? ನಿಮ್ಮ ಲಕ್ಷ ನಮಗೆ ಅಲಕ್ಷ್ಯ

ಪ್ರತಿನಿಧಿ: ಐವತ್ತು.

ರಾಜ: ಮೊದಲು ಇಲ್ಲಿಂದ ಕಾಲೆತ್ತು.

ಪ್ರತಿನಿಧಿ: ಲಾಸ್ಟ್ ಅಂಡ್ ಫೈನಲ್, ಒಂದು ಕೋಟಿ ಕೊರುತ್ತೇವೆ (ಹಣದ ಗಂಟು ತೋರಿಸುವನು, ರಾಜ ಪುಸಕ್ಕನೆ ಕಿತ್ತುಕೊಳ್ಳುವನು).

ರಾಜ: ನೀವೇನೂ ಚಿಂತೆ ಮಾಡಬೇಡಿ, ನಿಮಗೆ ನಿಂತ ಹೆಜ್ಜೆಯಲ್ಲೇ ಪರ್ಮಿಷನ್ ಕೊಡಿಸುವ ಹೊಣೆ ನಮ್ಮದು. ನಮ್ಮೆಲ್ಲರಿಗೂ ನೀರು ಕುಡಿಸುವ ಜವಾಬ್ದಾರಿ ನಿಮ್ಮದು, ಹೋಗಿಬನ್ನಿ...

(ಹೋಗುವವನು) ಮಂತ್ರಿಗಳೇ ಸಾರಿರಿ ಡಂಗೂರಾ, ಮಾಡಿರಿ ಪ್ರಚಾರ, ಇನ್ನು ಮುಂದೆ ಯಾರೂ ಬಾವಿ ನೀರು ಸೇದಬಾರದು, ಒರತೆ ನೀರು ಕುಡಿಯಬಾರದು, ಕೆರೆ ಕಡೆ ಹೋಗಬಾರದು, ಹಳ್ಳಗಳಲ್ಲಿ ತೊಳೆಯಬಾರದು, ಕಪಿಲೆ ಹೊಡೆಯಬಾರದು, ಏತ ಎತ್ತಬಾರದು, ಎಲ್ಲದಕ್ಕೂ ಕಂಪನಿಯವರು ಕೊಡುವ ನೀರನ್ನೇ ಬಳಸಬೇಕು, ತಪ್ಪಿದವರಿಗೆ ಕಠಿಣ ಶಿಕ್ಷೆ.

ಮಂತ್ರಿ: ತಮ್ಮಿಷ್ಟದಂತೆಯೇ ಆಗಲಿ ಮಹಾಪ್ರಭು (ಇಬ್ಬರೂ ಹೋಗುವರು).

(ಡಂಗೂರ ಹೊಡೆಯುವ ಸದ್ದು ಕ್ಷೀಣವಾಗಿ ಶುರುವಾಗಿ ತಾರಕಕ್ಕೇರಿ ಮತ್ತೆ ಕ್ಷೀಣವಾಗುವುದು)

(ಒಂದು ವರ್ಷದ ನಂತರ...)

ರಾಜ: ಮಂತ್ರಿಗಳೇ ನಾವು ನೀರಿನ ಖಾಸಗೀಕರಣ ಮಾಡಿ ವರ್ಷದ ಮೇಲಾಯಿತು. ಮಾರುವೇಷದಲ್ಲಿ ಹೋಗಿ ಜನರು ಬಾಟಲಿ ನೀರು, ಕ್ಯಾನ್ ನೀರು, ಟ್ಯಾಂಕರ್ ನೀರು, ಕೊಳವೆ ಬಾವಿ ನೀರು ಬಳಸುತ್ತಾ ಹೇಗೆ ಸಂತೋಷ ಪಡುತ್ತಿದ್ದಾರೆಂದು ನೋಡಿಕೊಂಡು ಬರೋಣ ಬನ್ನಿ.

ಮಂತ್ರಿ: ನಡೆಯಿರಿ ಪ್ರಭು.

(ದಾರಿಯಲ್ಲಿ ಒಬ್ಬ ಬಿಲ್ಲಿನಂತೆ ಬಾಗಿದ ಕಾಲುಗಳ ಯುವಕ ಸಿಗುತ್ತಾನೆ)

ರಾಜ: ಅಯ್ಯಾ ಯುವಕ, ಯಾಕೆ ಹೀಗೆ ಕಾಲುಗಳನ್ನು ಬಿಲ್ಲಿನಂತೆ ಬಗ್ಗಿಸಿ ನಡೆಯುತ್ತಿರುವೆ.

ಯುವಕ: ಕಳೆದ ಒಂದು ವರ್ಷದಿಂದ ಹೀಗಾಗಿದೆ, ಕೊಳವೆ ಬಾವಿಯ ನೀರು ಕುಡಿದು ನಮ್ಮ ಹಳ್ಳಿಯ ಬಹುತೇಕರು ಹೀಗೇ ಆಗಿದ್ದಾರೆ, ಬಾವಿ ನೀರು ಕುಡಿಯುತ್ತಿದ್ದಾಗ ಇದ್ಯಾವುದೂ ಇರಲಿಲ್ಲ.

(ಮುಂದೆ ಹೋಗುತ್ತಾ ಕೆಟ್ಟ ವಾಸನೆ ಬಂದು ಮೂಗು ಮುಚ್ಚಿಕೊಳ್ಳುವರು)

ರಾಜ: ಅಯ್ಯಯ್ಯೋ ಇದೇನಿದು, ಇಷ್ಟು ಕೆಟ್ಟ ವಾಸನೆ, (ಅಲ್ಲಿ ಒಬ್ಬ ಹೆಂಗಸು ಪ್ರವೇಶ) ಏನಮ್ಮಾ ಈ ಏರಿಯಾದಲ್ಲಿ ಇದೇನಿದು ಕೆಟ್ಟ ವಾಸನೆ, ನಾಯಿ ನರಿ ಏನಾದರೂ ಸತ್ತಿದೆಯೇ?

ಹೆಂಗಸು: ನಾಯೀನೂ ಇಲ್ಲ, ನರೀನೂ ಇಲ್ಲ, ನಮ್ಮೂರಿನ ಹಾಳು ಬಾವಿಯಿಂದ ಬರ್ತಾ ಇದೆ ಸ್ವಾಮಿ, ಈ ವಾಸ್ನೆ. ಇಪ್ಪತ್ನಾಲ್ಕು ಗಂಟೇನೂ ಹಿಂಗೇ ಇರ್ತದೆ, ನಮಗೆ ಅಭ್ಯಾಸ ಆಗೋಗಿದೆ.

ಮಂತ್ರಿ: ಬಾವಿಯಿಂದ ಹ್ಯಾಗಮ್ಮಾ ವಾಸ್ನೆ ಬರ್ತದೆ.

ಹೆಂಗಸು: ಅಯ್ಯೋ ಅವನ ಮಕ ಮುಚ್ಚ, ಅವನಿಗೆ ಬರಬಾರದ್ದು ಬರ, ಅವನ ನಾಲಗೆ ಸೇದೋಗ, ಅವನವನಲ್ಲಾ ಅವ್ನು ನಮ್ ದೇಶದ ರಾಜ...

ರಾಜ: ತಾಯಿ ಈ ಸಹಸ್ರನಾಮಾರ್ಚನೆ ನಿಲ್ಲಿಸಿ ಮ್ಯಾಟರ್ ಏನೂಂತ ಹೇಳು.

ಹೆಂಗಸು: ಏನೂಂತ ಹೇಳ್ಲಿ, ಬಾಟ್ಲಿ ನೀರು, ಟ್ಯಾಂಕರ್ ನೀರು ಕೊಡೋಕೆ ಅದ್ಯಾರೋ ಮನೆಹಾಳ್ ಕಂಪನಿಗೆ ಕೊಟ್ರು, ನಮ್ ಜನ ಮದ್ಲೇ ಸೋಮಾರಿಗಳು, ತೂಕಡಿಸೋರಿಗೆ ಹಾಸ್ಗೆ ಹಾಸ್ ಕೊಟ್ಟಂಗಾಯ್ತು, ಯಾವಾಗ ಬಾಟ್ಲಿ ನೀರು ಸಿಕ್ತೋ, ಬಾವಿನೆಲ್ಲಾ ಡಸ್ಟ್ ಬಿನ್ ಮಾಡ್ಕಂಡ್ರು. ಸತ್ತಿರೋ ನಾಯಿ, ದನ, ಕುರಿ, ಮೇಕೆ, ಹೊಡೆದುಹೋಗಿರೋ ಪ್ಲಾಸ್ಟಿಕ್ ಬಿಂದ್ಗೆ, ಬಕೆಟ್ಟು, ಹಳೆ ಬಟ್ಟೆನೆಲ್ಲಾ ಬಾವಿಗ್ ತುಂಬಿರು. ತಗೋ ಮನ್ನೆ ಮಳೆ ಬಂದಾಗ ಬಾವಿಲಿ ನೀರು ಬಂದು ಕೊಳೆತು ಈ ತರ ವಾಸ್ನೆ ಬರ್ತಾ ಇದೆ.

ಮಂತ್ರಿ: ಅಯ್ಯೋ ಕೊಳೆತ ಇಲಿಯನ್ನು ಮೂಗಿಗೆ ತುರುಕಿದಂತಿದೆಯಲ್ಲ... (ಮುಂದುವರಿಯುವರು, ಅಲ್ಲೊಂದು ಕಡೆ ಗುಂಪು, ಹೆಂಗಸಿನ ರೋದನ ಕೇಳಿ ಬರುತ್ತದೆ, ಅಲ್ಲಿ ಸಿಕ್ಕ ಒಬ್ಬರನ್ನು ಕರೆದು) ಏನು ವಿಷಯ, ಏನಾಯಿತು?

ಆತ: ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ರಾಜ: ಆತ್ಮಹತ್ಯೆಯೇ ಯಾಕಾಗಿ?

ಆತ: ವ್ಯವಸಾಯದಲ್ಲಿ ನಷ್ಟ ಆಯ್ತು, ಸಾಲ ತೀರಿಸೋಕಾಗ್ಲಿಲ್ಲ, ಸಾಲಗಾರ್ರು ಬಂದು ಮನೆ ತಾವ ಗಲಾಟೆ ಮಾಡಿದ್ರು, ಅವಮಾನ ತಡೀಲಾರ್ದೆ ನೇಣು ಹಾಕ್ಕೊಂಡ, ಪಾಪ, ಮನೇಲಿ ಚಿಕ್ಕ ಚಿಕ್ಕ ಮಕ್ಕಳಿದ್ದಾರೆ.

ರಾಜ: ಸಾಲ ಏಕೆ ಮಾಡಿದ್ದರು?

ಆತ: ವ್ಯವಸಾಯ ಮಾಡೋಕೆ ಐದಾರು ಕೊಳವೆ ಬಾವಿ ಕೊರೆಸಿದ್ದ. ಯಾವುದರಲ್ಲೂ ಸರಿಯಾಗಿ ನೀರು ಸಿಗ್ಲಿಲ್ಲ, ದುಡ್ಡೂ ಖರ್ಚಾಯ್ತು, ತೋಟವೂ ಒಣಗೋಯ್ತು. ಪೂರ್ವಿಕರ ಕಾಲದಿಂದ ಕಪಿಲೆ ಬಾವಿಯಲ್ಲಿ ಬೆಳೆಸಿದ್ದ ತೋಟ ಕಣ್ಣೆದುರೇ ನಾಶ ಆಯ್ತು. ಅದನ್ನು ನೋಡಲಾರದೆ ಹೊಲದಲ್ಲಿರೋ ಹೊಂಗೆ ಮರಕ್ಕೇ ನೇಣು ಹಾಕಿಕೊಂಡಿದ್ದಾರೆ.

ಸತ್ತವನ ಹೆಂಡತಿ: ನಾವು ಹೆಂಗೋ ಬಾವಿ ನೀರು, ಕೆರೆ ನೀರಲ್ಲಿ ನೆಮ್ಮದಿಯಾಗಿ ಬೇಸಾಯ ಮಾಡ್ತಿದ್ವಿ. ಅವನ್ಯಾರೋ ರಾಜ ಅಂತೆ, ಮಂತ್ರಿ ಅಂತೆ. ಕೊಳವೆ ಬಾವಿ ಹಾಕ್ರಿ ಅಂತ ಹೇಳಿ ನಮ್ಮುನ್ನ ಹಾಳ್ ಮಾಡಿದ್ರು. ಮುಗೀತಪ್ಪಾ ನಮ್ ಬದುಕು, ದಿಕ್ಕಿಲ್ಲದ ಪರದೇಶಿ ಆದ್ವಿ ನಾವು.

ಆತ: ಎಷ್ಟು ಸಮೃದ್ಧವಾಗಿತ್ತು ಸ್ವಾಮಿ ನಮ್ಮೂರು, ಎಲ್ ನೋಡಿದ್ರು ನೀರು, ಎಲ್ ನೋಡಿದ್ರು ಹಸುರು. ಗಂಡುಸ್ರು ಹೊಲಕ್ಕೆ ಹೋದ್ರೆ ಹೆಣ್ಮಕ್ಕಳು ಖುಷಿಯಾಗಿ ಬುತ್ತಿ ಹೊತ್ಗೊಂಡೋಗರು. ಈಗ ಗಂಡುಸ್ರು ಹೊಲಕ್ಹೋದ್ರೆ ತಿರುಗಿ ಮನೇಗ್ ಬತ್ತಾರೋ ಇಲ್ವೋ ಅಂತ ಕಣ್ಣಿಗೆ ಎಣ್ಣೆ ಬಿಟ್ಕಂಡು ಕಾಯೋ ತರ ಆಗಿದೆ. ಯಾವಾಗ ನೀರು ಪಾತಾಳಕ್ಹೋಯ್ತೋ, ರೈತರ ಬದುಕು ನರಕ ಆಗೋಯ್ತು.

(ಗುಂಪಿನಿಂದ ರಾಜ–ಮಂತ್ರಿ ಹೊರ ಬರುತ್ತಾರೆ)

ರಾಜ: ಏನು ಮಂತ್ರಿ ಇದು, ಏನಾಗಿ ಹೋಯ್ತು... ನಮ್ಮ ಕಣ್ಣ ಮುಂದೆಯೇ ಒಂದಿಡೀ ತಲೆಮಾರು ನಾಶವಾಗುತ್ತಿದೆಯಲ್ಲ... ಹಣದಾಸೆಗೆ ಬಿದ್ದು ಎಂಥ ಅನಾಹುತವಾಯಿತು. ಸಾಕು... ಸಾಕು ಈ ದುರಂತ, ಮಂತ್ರಿಗಳೇ ಈಗಲೇ ಕಾರ್ಯೋನ್ಮುಖರಾಗಿ, ನೀರಿನ ಖಾಸಗೀಕರಣ ನಿಲ್ಲಿಸಿ, ಬಾಟಲಿ ನೀರಿಗೆ ಕೊನೆ ಹಾಡಿ. ಮಳೆ ನೀರು ಸಂರಕ್ಷಿಸೋಣ, ಸಾಂಪ್ರದಾಯಿಕ ಜಲ ಸಂರಕ್ಷಣಾ ಮಾದರಿಗಳಿಗೆ ಮರಳಿ ಜೀವ ಕೊಡೋಣ. ಈ ಪ್ರಯತ್ನ ನನ್ನ ಅರಮನೆಯಿಂದಲೇ ಮೊದಲು ಆರಂಭವಾಗಲಿ. ■

---

## ನನ್ನ ಕನ್ನಡ

**ರೇಣುಕಾ ಸಿದ್ಧಿ,**
ರಂಗನಟಿ



## ಅನ್ನ-ಆತ್ಮ ವಿಶ್ವಾಸದ ಭಾಷೆ

ನನ್ನ ಮನೆಯ ಭಾಷೆ ಕೊಂಕಣಿ ಮತ್ತು ಮರಾಠಿ ಮಿಶ್ರವಾಗಿರುವ ಸಿದ್ಧಿ ಜನಾಂಗದ ಭಾಷೆ. ಆದರೆ, ನಾನು ಹೊರಜಗತ್ತನ್ನು ಗ್ರಹಿಸುತ್ತಿರುವುದು ಕನ್ನಡದ ಮೂಲಕವೇ. ಎಲ್ಲೋ ಇದ್ದ ನನಗೆ ನಾಲ್ಕಾರು ಜನರ ಮುಂದೆ ಆತ್ಮವಿಶ್ವಾಸದಿಂದ ಮಾತನಾಡಲು ಶಕ್ತಿಕೊಟ್ಟ ಭಾಷೆ ಕನ್ನಡ.

'ಆಫ್ರಿಕನ್ ತರಹ ಇದ್ದೀರಾ, ಆದ್ರೂ ಕನ್ನಡ ಮಾತನಾಡ್ತೀರಾ' ಅಂತೆಲ್ಲ ಜನ ಹುಬ್ಬೇರಿಸಿ ಆಶ್ಚರ್ಯ ವ್ಯಕ್ತಪಡಿಸುವಾಗ, ತಣ್ಣಗೆ ನಕ್ಕು, ಒಳಗೊಳಗೆ ಹೆಮ್ಮೆಪಡಲು ಹೇಳಿಕೊಟ್ಟ ಭಾಷೆ ಕನ್ನಡ. ಸಮಕಾಲೀನ ಕನ್ನಡ ಎಂದಾಗ ನನಗೆ ಆತಂಕವೇ ಹೆಚ್ಚಾಗುತ್ತದೆ. ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ನಾನು ನಮ್ಮ ರಂಗ ತಂಡ 'ವೇಷ'ದ ಮೂಲಕ ಹಲವು ಶಿಕ್ಷಣ ಸಂಸ್ಥೆಗಳಿಗೆ ಹೋಗುತ್ತಿರುತ್ತೇನೆ. ಅಲ್ಲೆಲ್ಲ, ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡಲು ಬಾರದ ವಿದ್ಯಾರ್ಥಿಗಳಿದ್ದಾರೆ.

ಐಚ್ಛಿಕ ಕನ್ನಡ ಸಾಹಿತ್ಯವನ್ನು ಓದುತ್ತಿರುವ ನನಗೆ ಇಂಗ್ಲಿಷ್ ಐಚ್ಛಿಕ ತೆಗೆದುಕೊಳ್ಳಬಹುದಿತ್ತಲ್ಲ ಎಂದು ಸಲಹೆ ನೀಡಿದವರೂ ಇದ್ದಾರೆ. ನಾನೊಂದು ಪೈಸೆ ದುಡಿದು ತಿನ್ನಬೇಕಾದರೂ ಅದು ಕನ್ನಡದಿಂದಲೇ.